ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 04 ಎಟಿಎಸ್[1] 2017

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:-05/09/2017.

**ಇವರಿಗೆ,**
ಪ್ರಾಚಾರ್ಯರು,
ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್,
ಮೈಸೂರು.

ಮಾನ್ಯರೆ,

ವಿಷಯ:- ಬಿ.ಇ ಮತ್ತು ಡಿಪ್ಲೋಮಾ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಬೇತಿ ನೀಡಲು ಸಂದರ್ಶನವನ್ನು ತಮ್ಮ ಸಂಸ್ಥೆಯಲ್ಲಿ ನಡೆಸುವ ಕುರಿತು.

ಉಲ್ಲೇಖ:- ನಿರ್ದೇಶಕರು, ಶಿಶಿಕ್ಷು ತರಬೇತಿ ಮಂಡಳಿ(Board Of Apprenticeship Training), ಚೆನ್ನೈ ಇವರ ಪತ್ರಸಂಖ್ಯೆ: BAT/SRP/34/CS-DTE/17 dated:31/05/2017

-***-

ಶಿಶಿಕ್ಷು ತರಬೇತಿ ಅಧಿನಿಯಮ ಅಪ್ರೆಂಟಿಸ್ ಆಕ್ಟ್ 1961ರ (1973 & 1986 ರ ತಿದ್ದುಪಡಿ) ಪ್ರಕಾರ ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಬಿ.ಇ. ಮತ್ತು ಡಿಪ್ಲೋಮಾ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿ 3 ವರ್ಷ 3 ತಿಂಗಳ ಅವಧಿಯೊಳಗೆ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಸರ್ಕಾರಿ/ಖಾಸಗಿ ಒಡೆತನದ ಉದ್ದಿಮೆ/ಕೈಗಾರಿಕೆ ಸಂಸ್ಥೆಗಳಲ್ಲಿ ಪಡೆಯಲು ಅವಕಾಶ ಮಾಡಲಾಗಿದೆ.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ(MHRD) ಅಡಿಯಲ್ಲಿ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಕಾರ್ಖಾನೆ/ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಸಂಬಂಧ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಪ್ರಾದೇಶಿಕ ಶಿಶಿಕ್ಷು ತರಬೇತಿ ಮಂಡಳಿ(Board Of Apprenticeship Training), ಚೆನ್ನೈ ಇವರ ಸಹಯೋಗದೊಂದಿಗೆ **ದಿನಾಂಕ: 14/09/2017** ರಂದು ತಮ್ಮ ಸಂಸ್ಥೆಯ ಕ್ಯಾಂಪಸ್‌ನಲ್ಲಿ ಸಂದರ್ಶನ ನಡೆಸಲು ನಿರ್ಧರಿಸಲಾಗಿದೆ.

ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ತಮ್ಮ ಹಂತದಲ್ಲಿ ಸ್ಥಳೀಯ ಹಾಗೂ ಸುತ್ತಮುತ್ತಲಿನ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಮಾಹಿತಿಯನ್ನು ನೀಡಿ ಸಾಕಷ್ಟು ಪ್ರಮಾಣದಲ್ಲಿ ಅಭ್ಯರ್ಥಿಗಳು ಈ ಸಂದರ್ಶನದಲ್ಲಿ ಭಾಗವಹಿಸಿ ಶಿಶಿಕ್ಷು ತರಬೇತಿಯ(Apprenticeship Training) ಪ್ರಯೋಜನ ಪಡೆಯುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಹಾಗೂ ಈ ಬಗ್ಗೆ ಸ್ಥಳೀಯ ವೃತ್ತ ಪತ್ರಿಕೆಗಳಲ್ಲೂ ಸಹ ಪತ್ರಿಕಾ ಪ್ರಕಟಣೆ ನೀಡಲು ಸೂಚಿಸಲಾಗಿದೆ.

ಈ ಕಾರ್ಯಕ್ರಮದ ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ಶಿಶಿಕ್ಷು ತರಬೇತಿ ಮಂಡಳಿ(BOAT), ಚೆನ್ನೈ ಇಲ್ಲಿನ ಸಹ ನಿರ್ದೇಶಕರಾದ ಶ್ರೀ ಎಂ. ಸುರೇಶ್‌ಕುಮಾರ್(ದೂರವಾಣಿ ಸಂಖ್ಯೆ: 9952207099/9444897225) ಇವರನ್ನು ಸಂಪರ್ಕಿಸಲು ತಿಳಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

05/09/17

**ಜಂಟಿ ನಿರ್ದೇಶಕರು(ಎಟಿಎಸ್)**

05/09/17

To
e-governance, pl. upload
05/09/17